ಲಾಕ್‌ಡೌನ್ ಕ್ರಮೇಣ ಸ್ವಲ್ಪ ಸಡಿಲವಾಗಿ ಬೆಂಗಳೂರಿನಲ್ಲಿ ಸೋಂಕು ವೇಗವಾಗಿ ಹೆಚ್ಚಾಗುತ್ತಿರುವ ಸುದ್ದಿ ಬರತೊಡಗಿತು. ಇಲ್ಲಿಯವರೆಗೆ ದೂರದ ಅಮೂರ್ತ ವಿಷಯವಾಗಿದ್ದ ಸಾವು, ಸುತ್ತ ಸುಳಿದಾಡುತ್ತಾ ಯಾವ ದಿನದಲ್ಲಾದರೂ ಭೇಟಿ ಕೊಡಬಹುದಾದ ನೆಂಟನಾಯಿತು. ಮರೆಯಲ್ಲಿದ್ದುಕೊಂಡು ಆಗಾಗ ಕಿಚ್ ಕಿಚ್ ಸದ್ದು ಮಾಡುತ್ತಾ ಹತ್ತಿರದಲ್ಲೇ ಇರುವ ಸೂಚನೆ ಕೊಡತೊಡಗಿತು. ರಾಜೇಶನ ಅಪ್ಪನಂತೂ ಪ್ರತಿದಿನ ವಾಟ್ಸ್‌ಆ್ಯಪ್‌ನಲ್ಲಿ ನಗರದ ಮತ್ತು ಅವರಿರುವ ವಾರ್ಡಿನ ಸಾವಿನ ಸಂಖ್ಯೆಗಳನ್ನು ಕಳಿಸತೊಡಗಿದರು. ಪ್ರತಿ ಮೆಸೇಜಿನ ಜೊತೆ "ನಾನು ಆರಾಮಿದ್ದೇನೆ" ಎನ್ನುತ್ತಾರಾದರೂ ಅದರ ಹಿಂದಿನ ಆತಂಕ ಸ್ಪಷ್ಟವಿತ್ತು. ಅವರ ವಯಸ್ಸಿನ ಜೊತೆ ಅವರಿಗಿದ್ದ ಬಿಪಿ, ಇತ್ತೀಚೆಗೆ ಶುರುವಾಗಿದ್ದ ಆಸ್ತಮಾದಿಂದಾಗಿ ಭಯ ಇವನಿಗೂ ವರ್ಗಾವಣೆಯಾಗಿದ್ದರೂ ಹಾಗೇನಾಗಲಾರದು ಎಂಬ ಖಾಲಿ ಭರವಸೆಯಲ್ಲಿ ಹಗುರಾಗುತ್ತಿದ್ದ. ಆದರೆ, ಒಂದು ಸೆಕೆಯ ರಾತ್ರಿ ಕನಸಿನಲ್ಲಿ ಅಪ್ಪನೊಂದಿಗೆ ತಾನು ಯಾವುದೋ ಗಾಡಿಯಲ್ಲಿ ಟ್ರಾಫಿಕ್ಕಿನಲ್ಲಿ ಸಿಕ್ಕಿಕೊಂಡಿದ್ದು, ಕ್ರಮೇಣ ಆ ಗಾಡಿ ಆಂಬುಲೆನ್ಸ್ ಎಂದು ಗೊತ್ತಾಗಿ ಅದರ ಸೈರನ್ ಸದ್ದು ಹಲ್ಲಿಯ "ಕಿಚ್ ಕಿಚ್ ಕಿಚ್..." ಸದ್ದಾಗಿ ಬೆಚ್ಚಿ ಎದ್ದುಬಿಟ್ಟ. ಆ ರಾತ್ರಿ ಮತ್ತೆ ಕಣ್ಣು ಮುಚ್ಚಿದರೆ ಕನಸು ಮುಂದುವರಿಯುತ್ತೇನೋ ಎಂಬ ಭಯದಲ್ಲಿ ಒದ್ದಾಡಿದ. ಆ ದುಃಸ್ವಪ್ನದ ನಂತರ ಅವನಿಗೆ ಇತ್ತೀಚೆಗೆ ಹಲ್ಲಿಯ ಬಗ್ಗೆ ಮೂಡಿದ್ದ ನಿರಪಾಯಕಾರಿ ಭಾವನೆ ದೂರವಾಗಿಹೋಯಿತು.

ಮರುರಾತ್ರಿ ನಿದ್ದೆಮಾಡಲು ಭಯವಾಗಿ, ವಿಶೇಷವಾಗಿ ಸುಸ್ತಾದ ದಿನಗಳಿಗೆಂದು ಇಟ್ಟಿದ್ದ ವಿಸ್ಕಿ ಬಾಟಲ್ ತೆಗೆದ. ಆ ರಾತ್ರಿ ವಿಸ್ಕಿಯ ಪ್ರಮಾಣ ಮತ್ತು ಪರಿಣಾಮ ಸ್ವಲ್ಪ ಹೆಚ್ಚೇ ಆಯಿತು. ಇದರಿಂದ ಒಂದೆಡೆ ಅಪ್ಪನ ಸಾವಿನ ಭಯ ಉಬ್ಬಿದರೆ ಇನ್ನೊಂದೆಡೆ ದರಿದ್ರ ಹಲ್ಲಿಯ ಬಗ್ಗೆ ಕೋಪವೇರಿತು. ಅಪ್ಪ ಆಕಸ್ಮಾತ್ ಈ ಸೋಂಕಿಗೆ ಒಳಗಾಗಿಬಿಟ್ಟರೆ ತಾನು ಅಲ್ಲಿ ತಲುಪುವ ಮೊದಲೇ ಅವರು ಇಲ್ಲವಾಗಬಹುದು! ಮುಖ ನೋಡಲೂ ಬಿಡುವುದಿಲ್ಲವಂತೆ! ಅನೇಕ ಘೋರ ಕಲ್ಪನೆಗಳು ರಾಜೇಶನನ್ನು ಬಾಧಿಸಿದವು. ತಾನು ಕೊನೆಯ ಸಲ ಅಪ್ಪನೊಂದಿಗೆ ಮುಖತಃ ಏನು ಮಾತನಾಡಿದೆ ಎಂಬುದು ಎಷ್ಟು ಯೋಚಿಸಿದರೂ ನೆನಪಾಗದೆ ಒದ್ದಾಡಿದ. ಅದೇ ಹೊತ್ತಿನಲ್ಲಿ ಈ ಹಲ್ಲಿಗೆ ತಾನು ಹೆದರುತ್ತಿರುವ ಪರಿ ನೆನೆದು ಅಸಹ್ಯಪಟ್ಟುಕೊಂಡ. ಇನ್ನಷ್ಟು ಕುಡಿದಮೇಲೆ ಅದೇ ಮತ್ತಿನಲ್ಲಿ ಅಡಿಗೆಮನೆಗೆ ಹೋಗಿ ಲೈಟ್ ಹಾಕಿ, "ಏ ದರಿದ್ರ ಹಲ್ಲೀ..." ಎಂದು ಕಿರುಚಿದ. ಆಯತಪ್ಪುವಷ್ಟು ಕುಡಿದಿದ್ದವನು, "ನಮ್ಮಪ್ಪ ಹೋಗ್ಬಿಟ್ರೆ ನಾನೇನು ಮಾಡ್ಲಿ ಹೇಳು!..." ಎಂದು ಅಲ್ಲೇ ಕಣ್ಣೀರು ಸುರಿಸಿದ. "ನಿಂಗೇನು ನಾನು ಹೆದರಲ್ಲ ಗೊತ್ತಾಯ್ತಾ" ಎಂದು ಅಬ್ಬರಿಸಿದ. ಹಾಗೆಯೇ ಅಸಂಬದ್ಧವಾಗಿ ಕೂಗಾಡುತ್ತಾ ಮಂಪರಿನಲ್ಲಿ ಅಡಿಗೆಮನೆ ಮತ್ತು ಲಿವಿಂಗ್ ರೂಮ್ ನಡುವೆ ನೆಲದ ಮೇಲೆಯೇ ನಿದ್ದೆಹೋಗಿಬಿಟ್ಟ.

ಮರುದಿನ ಎಚ್ಚರವಾದಾಗ ತಾನು ಮಲಗಿರುವ ಜಾಗ ಮತ್ತು ಸ್ಥಿತಿ ಕಂಡು ಗಾಬರಿಯಾಗಿ ಮೈಕೈ ತಡವಿಕೊಂಡ. ತಲೆ ಸಿಡಿದುಹೋಗುವಂತಹ ಹ್ಯಾಂಗೋವರ್ ಮತ್ತು ನಿನ್ನೆಯ ವರ್ತನೆಯ ಬಗೆಗಿನ ನಾಚಿಕೆ ಬಿಟ್ಟರೆ ಬೇರೆ ಯಾವ ಅಪಸವ್ಯವೂ ಇರಲಿಲ್ಲ. ತಾನು ಹಲ್ಲಿಯ ಬಿಡಾರದ ಬಳಿಯೇ ರಾತ್ರಿವಿಡೀ ಕಳೆದರೂ ತನಗೇನೂ ಆಗದಿರುವುದು ರಾಜೇಶನಿಗೆ ವಿಚಿತ್ರ ಬಗೆಯಲ್ಲಿ ನೆಮ್ಮದಿ ತಂದಿತು. ಭಯವನ್ನು ಎದುರಿಸುವುದೆಂದರೆ ಇದೇ ಇರಬೇಕೇನೋ ಎಂದುಕೊಂಡ. ಇದಾಗಿ ಕೆಲವು ದಿನಗಳಲ್ಲಿ ಅವನ ಮನಃಸ್ಥಿತಿ ಸ್ವಲ್ಪ ಸುಧಾರಿಸಿ ನಿಧಾನವಾಗಿ ಲಿವಿಂಗ್ ರೂಮ್ ಬಳಸಲೂ ಆರಂಭಿಸಿದ.

ಇದಾದ ಐದನೆಯ ದಿನ ರಾಜೇಶ ಬೆಳಗ್ಗೆ ಎದ್ದಾಗಲೇ ವಾಟ್ಸ್‌ಆ್ಯಪ್‌ನಲ್ಲಿ ಅಪ್ಪನ ಮೆಸೇಜಿತ್ತು. "ಯಾಕೋ ಸಣ್ಣಗೆ ಜ್ವರ, ಆದರೆ ಗಾಬರಿ ಬೇಡ." ರಾಜೇಶ ತತ್ತರಿಸಿ ಹೋಗಲು ಇಷ್ಟೇ ಸಾಕಿತ್ತು. ತಕ್ಷಣವೇ ಬೆಂಗಳೂರಿಗೆ ಹೋಗಲು ಏನೇನು ವ್ಯವಸ್ಥೆ ಮಾಡಿಕೊಳ್ಳಬೇಕೆಂದು